## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 265 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ<br>(ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 06-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರಿನ ಹಲವು ರಸ್ತೆಗಳು ಗುಂಡಿಬಿದ್ದು, ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="6">• ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆ ಮೇಲ್ಭಾಗದ ಮತ್ತು ಮುಖ್ಯ ರಸ್ತೆಗಳಿಗೆ ಹಾಗೂ ಒಳಭಾಗದ ರಸ್ತೆಗಳಿಗೆ "ವಾಹನ ಸಾಂದ್ರತೆ"ಯ ಆಧಾರದ ಮೇಲೆ ಆದ್ಯತೆಯನ್ನು ನೀಡಿ ಅಗತ್ಯತೆಯ ಅನುಗುಣವಾಗಿ ಅನುದಾನವನ್ನು ಒದಗಿಸಲಾಗುತ್ತಿರುತ್ತದೆ.<br>• ಒಳಭಾಗದ ರಸ್ತೆಗಳಿಗೆ ಪ್ರತಿ ವರ್ಷ ಬಿಬಿಎಂಪಿ ಆಯವ್ಯಯದಲ್ಲಿ ಪ್ರತಿ ವಾರ್ಡ್‌ಗೆ ರೂ.15.00 ಲಕ್ಷಗಳನ್ನು ರಸ್ತೆ ಗುಂಡಿಗಳ ದುರಸ್ಥಿಗಾಗಿ ಮೀಸಲಿಡಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚಾಗಿ ವಾಸಿಸುವ ಒಳಭಾಗದ ರಸ್ತೆಗಳಿಗೆ ಅಗತ್ಯತೆಯ ಅನುಗುಣವಾಗಿ ಅನುದಾನ ಒದಗಿಸಲಾಗುತ್ತಿರುತ್ತದೆ.<br>• ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರಸ್ತೆ ಕತ್ತರಿಸುವಿಕೆಯ ಜಾಗದಲ್ಲಿ ಬೆಂಗಳೂರು ಜಲ ಮಂಡಳಿ ವತಿಯಿಂದಲೇ ರಸ್ತೆ ಗುಂಡಿ ದುರಸ್ಥಿಪಡಿಸುವ ನಿಯಮವನ್ನು ಹಾಕಲಾಗಿರುತ್ತದೆ.<br>• ಮುಖ್ಯ ಅಭಿಯಂತರರ ಮಟ್ಟದ ಅಧಿಕಾರಿಯ ನೇತೃತ್ವದಲ್ಲಿ ರಸ್ತೆ ಗುಣಮಟ್ಟ ಹಾಗೂ ಗುಣ ಭರವಸೆ ಶಾಖೆಯನ್ನು ಸೃಜಿಸಲಾಗಿದ್ದು, ಇದರಲ್ಲಿ ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳನ್ನು ನೇಮಿಸಲಾಗಿದೆ.<br>• ಬೆಂಗಳೂರು ನಗರದ ರಸ್ತೆಗಳ ತಳಭಾಗದಲ್ಲಿ "ಸಾಂಪ್ರದಾಯಿಕವಾಗಿ" ಬೆಸ್ಕಾಂ ಕೇಬಲ್, ನೀರು ಸರಬಾರಜು ಮತ್ತು ಒಳಚರಂಡಿ ಕೊಳವೆಗಳು, ಗೇಲ್‌ಗ್ಯಾಸ್‌ನ ಕೊಳವೆಗಳು, ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯ ಬೃಹತ್ ಮತ್ತು ಹೆಚ್ಚಿನ ಸಾಮರ್ಥ್ಯದ ಕೇಬಲ್‌ಗಳ ಅಳವಡಿಕೆ ಮತ್ತು ಓಎಫ್‌ಸಿ ಕೇಬಲ್‌ಗಳ ಅಳವಡಿಕೆಯಿಂದ ರಸ್ತೆಯ ಮೇಲ್ಮೈ ಭಾಗವು ಶಿಥಿಲಗೊಂಡು ರಸ್ತೆ ಗುಂಡಿಗಳು ಉದ್ಭವಿಸುತ್ತಿರುವುದು ಕಂಡುಬಂದಿದ್ದು, ಇದರ ಶಾಶ್ವತ ಪರಿಹಾರಕ್ಕಾಗಿ ಟೆಂಡರ್ ಶ್ಯೂರ್ ಮಾದರಿ ವೈಟ್ ಟಾಪಿಂಗ್ ರಸ್ತೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.<br>• ರಸ್ತೆಗಳ ದುರಸ್ಥಿ ನಿರಂತರ ಪ್ರಕ್ರಿಯೆಯಾಗಿದ್ದು, ಕಾಲಮಿತಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ಯತೆ ಮತ್ತು ಅಗತ್ಯತೆಯ ಅನುಗುಣವಾಗಿ ರಸ್ತೆಗಳನ್ನು ದುರಸ್ಥಿಗೊಳಿಸಲಾಗುತ್ತಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ ಮೇಲ್ಭಾಗದ ಮತ್ತು ಮುಖ್ಯ ರಸ್ತೆಗಳಲ್ಲಿ ಮಾತ್ರ ರಸ್ತೆ ಸರಿಪಡಿಸುವುದು ಬಿಟ್ಟರೆ ಒಳಭಾಗದಲ್ಲಿ ರಸ್ತೆಗುಂಡಿ ಬಿದ್ದು ರಸ್ತೆಗಳು ಹಾಳಾಗಿ ಹಲವು ವರ್ಷಗಳ ನಂತರವೂ ಹಾಗೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಇ)</td><td>ವಾರ್ಡ್‌ಗಳು, ಏರಿಯಾಗಳ ರಸ್ತೆಗಳ ಗುಣಮಟ್ಟ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಉಸ್ತುವಾರಿಗಳು ಅಥವಾ ಅಧಿಕಾರಿಗಳನ್ನು ನೇಮಿಸಲಾಗಿದೆಯೇ;</td></tr>
<tr><td>ಈ)</td><td>ಹಾಗಿದ್ದರೂ ಸಹ ರಸ್ತೆಗಳು ಸಂಪೂರ್ಣವಾಗಿ ದುರಸ್ಥಿ ಕಾಣದೇ ಇರುವುದಕ್ಕೆ ಯಾರು ಹೊಣೆ;</td></tr>
<tr><td>ಉ)</td><td>ಕೇವಲ ವಿ.ಐ.ಪಿ ಮತ್ತು ವಿ.ವಿ.ಐ.ಪಿಗಳು ಓಡಾಡುವ ರಸ್ತೆಗಳು ಮಾತ್ರ ಗುಣಮಟ್ಟದಿಂದ ಕೂಡಿದ್ದು, ಅವರಿಗೆ ಮಾತ್ರ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಟ್ಟು ಜನಸಾಮಾನ್ಯರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ;</td></tr>
<tr><td>ಊ)</td><td>ಯಾವ ಕಾಲಮಿತಿಯಲ್ಲಿ ರಸ್ತೆಗಳನ್ನು ದುರಸ್ಥಿಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು?</td></tr>
</table>

**ನಅಇ 99 ಎಂಎನ್‌ವೈ 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ